Regd No M 1299 34 th Year ತಾ|| 17—1—51

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1—14—0

ಸತ್ಯವಾದಿ
SATYAVADI

ಸಂಪಾದಕರು- ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಗೋ ರ ಕ್ಷ
[ತಿಂಗಳಿಗೊಂದಾವರ್ತಿ]
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 0 8 ಆಣೆ

Protect the Cow
ಗೋರಕ್ಷಣೆ ನಡೆಯಲಿ

ವೃತ್ತಾಂತ ಸಂಗ್ರಹ

ಶ್ರೀ ಶ್ರೀ ಕರವೀರಪೀಠಾಧಿಪತಿ ಸ್ವಾಮಿಗಳು ಮೈಸೂರು ದೇಶದಲ್ಲಿ ಮುಂದಿನ ತಿಂಗಳ ನೂರನೇ ವಾರದಲ್ಲಿ ಧರ್ಮೋಪದೇಶ ಪ್ರವಾಸ ಕೈಗೊಳ್ಳುವರೆಂದು ತಿಳಿಯಬಂದಿದೆ.

ಂ ಂ ಂ ಂ

ವಾಷಿಂಗ್ಟನ್— ಅಂತರರಾಷ್ಟ್ರೀಯ ಭದ್ರತೆಗೆ ವಿನಿಯೋಗವಾಗುವ 746 ಕೋಟಿ 10 ಲಕ್ಷ ಡಾಲರುಗಳಲ್ಲಿ ಅಟ್ಲಾಂಟಿಕ್ ರಕ್ಷಣೆಗೂ ಮತ್ತು ಇತರ ಮಿತ್ರ ರಾಷ್ಟ್ರಗಳಿಗೂ ವೆಚ್ಚ ಮಾಡಲಾಗುವುದು

ಂ ಂ ಂ ಂ

8 ನೇ ಸೈನ್ಯ ಕೇಂದ್ರ— ರಾಯಿಟರ್ ಸಂಸ್ಥೆಯ ಯುದ್ಧ ಬಾತ್ಮೀದಾರ ಅಲೆಕ್ಸ್ ವಾಲಂಟೈನ್ ಬರೆದಿದ್ದ ಸುದ್ದಿ ಬಗ್ಗೆ ಸೆನ್ಸಾರ್ ವಿಷಯದಲ್ಲಿ ಮೊದಲನೆ ಸೈನ್ಯಾಧಿಕಾರಿಯು ತನಗಿಂತ ಮೇಲಧಿಕಾರಿಯ ಪರಿಶೀಲನೆಗೆ ಒಪ್ಪಿಸಲು ಒಡಂಬಡದೆ ಸುದ್ದಿಗಾರನ ಮೇಲೆ ದುಂಡಾವರ್ತಿ ನಡೆಸಿ ಎಲ್ಲಾ ಹಕ್ಕುಬಾಧ್ಯತೆ ಕಿತ್ತುಕೊಂಡು ನಾನಾ ಪ್ರತಿಬಂಧಕ ವಿಧಿಸಿದನು.

ಂ ಂ ಂ ಂ

ಬಂಗನಪಲ್ಲಿ ನವಾಬರು ರಾಜರ ಸಂಘಕ್ಕೆ ರಾಜೀನಾಮೆ ಕೊಟ್ಟು, ಇಂದಿನ ಪ್ರಜಾಪ್ರಭುತ್ವ ಕಾಲದಲ್ಲಿ ಅರಸರುಗಳಿಗೆ ಹಿಂದಿನ ಅಧಿಕಾರ ದರ್ಪಗಳು ಬೇಕೆಂದು ಹೋರಾಡುವುದು ಹಾಸ್ಯಾಸ್ಪದವೇ ಸರಿ ಎಂದಿರುವರು

ಂ ಂ ಂ ಂ

ಮೈಸೂರು ವೃತ್ತಪತ್ರಿಕಾ ಶಾಸನವನ್ನು ಪರಿಶೀಲಿಸಲು ನೇಮಕ ಮಾಡಿರುವ ಸಮಿತಿಯ ಸದಸ್ಯರುಗಳ ಜೈಕಿ ರಾಜಧಾನಿಯ ಮೈಸೂರು ಪತ್ರಿಕೆಯ ಸಂಪಾದಕರಾದ ಶ್ರೀ ಟಿ. ನಾರಾಯಣರವರೂ ಒಬ್ಬರಾಗಿರುವುದಕ್ಕಾಗಿ ಸಂತೋಷಿಸುತ್ತೇವೆ.

ಂ ಂ ಂ ಂ

ರಾಜಧಾನಿಯಲ್ಲಿ ತಾ| 20 ರಲ್ಲಿ ಮಹಾರಾಜಾ ಕಾಲೇಜು ಶತಮಾನೋತ್ಸವ ನಡೆಯುವುದರಿಂದ ಆ ದಿನ ಇಲ್ಲಿಯ ಎಲ್ಲಾ ಕೋರ್ಟುಗಳಿಗೂ ಶಾಲಾ ಕಾಲೇಜು ಶಿಕ್ಷಣ ಸಂಸ್ಥೆಗಳಿಗೂ ರಜಾ ಕೊಡಲಾಗಿದೆ.

ಂ ಂ ಂ ಂ

ಈಗ ಭಾರತದಲ್ಲಿರುವ ಆಹಾರವು ಕೇವಲ ಆರು ವಾರಗಳಿಗೆ ಮಾತ್ರ ಆಗುವುದೆಂದು ಹೇಳಲಾಗಿದೆ

ಂ ಂ ಂ ಂ

ಬೆಂಗಳೂರು— ಮುತದಾರರ ಪಟ್ಟಿ ಸಂಬಂಧದಲ್ಲಿ ಹಕ್ಕು ಶರಾರುಗಳ ಹಾಕಲು ಫೆಬ್ರವರಿ 15 ರವರೆಗೆ ಕಾಲಾವಕಾಶ ಕೊಡಲಾಗಿದೆಯೆಂದು ಸರಕಾರಿ ಪ್ರೆಸ್ ತಿಳಿಸುತ್ತದೆ.

ಂ ಂ ಂ ಂ

ಬೆಂಗಳೂರು— ಭಾರತಸರ್ಕಾರ ನಿರ್ಧರಿಸಿರುವ ಮಲೆಕ್ಟ್ರಿಕ್ ಒಲ್ಬುಗಳ ಬೆಲೆಗಳನ್ನು ವಿವರಿಸಿದ ಸರ್ಕಾರಿ ಪ್ರೆಸ್ ನೋಟು ಪ್ರಕಟಿಸಲ್ಪಟ್ಟಿದೆ ; ಹಾರ್ಲಿಕ್ಸ್, ಗ್ಲಾಕ್ಸೋ, ಒಸ್ಟರ್ ಮಿಲ್ಕ್ ಬೆಲೆ ವಿವರಿಸಿದ ಸರ್ಕಾರಿ ಪ್ರೆಸ್ ನೋಟು ಪ್ರಕಟಿಸಲ್ಪಟ್ಟಿದೆ.

ಂ ಂ ಂ ಂ

ಭದ್ರಾವತಿ— ತಾ| 15 ರಿಂದ 21 ರವರೆಗೆ ಮುಂಬೈನಿಂದ ಕಸೊತಿ ಕೆಲಸ ಪ್ರದರ್ಶನ ಏರ್ಪಡಿಸಲಾಗಿದೆ. — ವೀರಾವೂರದ ರುದ್ರಪ್ಪನೆಂಬುವನು ಬಿರಿಕೆ ಬೆಣ್ಣೆ ಮಾರಿದ್ದಕ್ಕೆ 25 ರೂ. ಜುಲ್ಮಾನೆಯಾಯಿತು.

ಪರೀಕ್ಷೆ ಶುಲ್ಕ ಹೆಚ್ಚಿಸಿದ್ದಕ್ಕೆ ವಿರೋಧ ಪ್ರದರ್ಶನ

ದಿವ್ಯವಾಣಿ

ಇಹದಲ್ಲಿ ಸಂಪದಾದಿ ಸೌಖ್ಯಗಳು, ಪರದಲ್ಲಿ ಸ್ವರ್ಗಾದಿ ಮೋಕ್ಷದವರೆಗಿನ ಸುಖಗಳು ಬುದ್ಧಿಶಾಲಿಯಾದ ಸತ್ಪುರುಷನಿಗೇ ಲಭಿಸುವುವು — ಗೀತೆ

ಹೈದರಾಬಾದು — ಪರೀಕ್ಷೆಯ ಶುಲ್ಕ ಹೆಚ್ಚಿಸಿದ್ದಕ್ಕಾಗಿ ಸಿಟಿ ಕಾಲೇಜಿನ ಎರಡು ಸಾವಿರ ವಿದ್ಯಾರ್ಥಿಗಳು ತಮ್ಮ ತರಗತಿಯಿಂದ ಹೊರಗೆ ಬಂದು ವಿರೋಧ ಪ್ರದರ್ಶನ ನಡೆಸಿದರು

ವಾಷಿಂಗ್ಟನ್— ಅಮೇರಿಕಾವು ರಷ್ಯಾಕ್ಕೆ ಯುದ್ಧ ಕಾಲದಲ್ಲಿ ಕೊಟ್ಟಿದ್ದ ಸಾಲವನ್ನು ತೀರಿಸಲು ಅಮೇರಿಕಾ ಒತ್ತಾಯ ಪಡಿಸುವುದೆಂದು ಹೇಳಲಾಗಿದೆ

ಲಂಡನ್— ಕಾಶ್ಮೀರ ಸಮಸ್ಯೆ ಬಗೆಹರಿಸಲು ಆಸ್ಟ್ರೇಲಿಯಾ ಸಾಧ್ಯವಾದ ಎಲ್ಲ ಸಹಾಯ ನೀಡುವುದಾಗಿ ಅಲಿಯು ಮಹಾಪ್ರಧಾನರೆಂದಿರುವರು.

ಲಂಡನ್— ಕ್ವೀ | ಜಾರ್ಜ್ ಬರ್ನಾರ್ಡ್ ಷಾರವರು ತಮ್ಮ ಆಸ್ತಿ ಕಾರ್ಯದರ್ಶಿಗೆ ವರ್ಷಕ್ಕೆ 200 ಪೌಂಡುಗಳು ದೊರೆಯುವ ವ್ಯವಸ್ಥೆ ಮಾಡಿದ್ದಾರೆ

ಜಮ್ಮು— ಭೂಮಿ ವರ್ಗೀಕರಣ ಸರ್ವಾರಂಭ ಷೇಕ್ ಅಬ್ದುಲ್ಲರ ಅಧ್ಯಕ್ಷತೆಯಲ್ಲಿ ಸೇರಿತ್ತು : ಸೂಚಿಸಿದ ಒಟ್ಟಿ ಧರಿಸಿದ 14 ವರ್ಷದ ಭಿಕ್ಷುಕನು ಹೇಗೂ ವೇದಿಕೆಯ ಮೇಲೆ ಸುಸುಳಿ, ಒಡಕನವನು ವರ್ಣಿಸುವ ಸುಂದು ಹಾಡೊಂಗನ್ನು ಹಾಡಿದನು. ಶೇಕ್ ಅಬ್ದುಲ್ಲಾ ಮೆಚ್ಚಿದರು. ಆ ಭಿಕ್ಷುಕ ಈಗ ರಾಜ್ಯದ ಸಂಚಾರಿ ಶಾಖೆಯಲ್ಲಿ ನೌಕರಿ ಪಡೆದಿದ್ದಾನೆ.

ಪತಿಯಾಳಾಳಕ್ಕೆ ಹತ್ತಿರವಿರುವ ಸೇವಾ ನಗರ ಭಾರತದ ಆದರ್ಶ ಹಳ್ಳಿ ; ಇಲ್ಲಿ 33 ಕುಟುಂಬಗಳ 138 ಜನರಿಗೆ ಒಂದೇ ಬಾವಿ ಸಾಮಾನ್ಯ ಆಸ್ತಿಗೆ ಸೇರಿದೆ : ಬಾಕಿ ಎಲ್ಲ ವಿಷಯಗಳೂ ಒಳ್ಳೆ ವ್ಯವಸ್ಥಿತ ರೀತಿಯಲ್ಲಿದೆ

ಬೊಂಬಾಯಿ— ಖೋಟಾ ಅಂಚೆ ಚೀಟಿ ತಯಾರಿಸುವ ಗುಂಪೊಂದನ್ನು ಪೋಲೀಸರು ಪತ್ತೆಮಾಡಿದ್ದಾರೆ

ಜನವರಿಯಲ್ಲಿ ೫ ದಿನಗಳಿಂದ ನಡೆಯುತ್ತಿದ್ದ ನಿರಾಶ್ರಿತರ ಸತ್ಯಾಗ್ರಹ ನಿನ್ನೆ ನಿಂತಿತು.

ಮನವನೂ ಅವನ ಬುದ್ಧಿಯೂ

ಯಾವಯಾವ ಮನುಷ್ಯರಿಗೆ ಯಾವಯಾವ ಆಲೋಚನೆಯು ಉತ್ತಮವೆಂದು ತೋರುವುದೋ, ಅವರವರ ಆಲೋಚನೆಯೇ ಮೇಲೆಂದು ತಮ್ಮಷ್ಟಕ್ಕೆ ತಾವು ಸಂತೋಷಪಡುವರು. ಲೋಕದಲ್ಲಿ ಪ್ರತಿಯೊಬ್ಬನೂ ತಾನೇ ಬಹು ಬುದ್ಧಿಶಾಲಿಯೆಂದು ತಿಳಿದುಕೊಳ್ಳುವನು: ತನ್ನನ್ನು ತಾನೇ ಗೌರವಿಸಿಕೊಳ್ಳುವನು : ತನ್ನನ್ನು ತಾನೇ ಹೊಗಳಿಕೊಳ್ಳುವನು ; ತಮ್ಮ ಪ್ರಜ್ಞೆಯೇ ಉತ್ತಮವಾದುದೆಂಬ ವಾದದಲ್ಲಿ ಎಲ್ಲರೂ ನಿಶ್ಚಿತರಾಗಿರುವರು : ಬೇರೆಯವರ ಆಲೋಚನೆಯನ್ನು ನಿಂದಿಸಿ ತನ್ನ ಬುದ್ಧಿಯನ್ನೇ ಬಾಯಿಬಾರಿಗೂ ಪ್ರಶಂಸೆ ಮಾಡಿಕೊಳ್ಳುವರು ; ಬೇರೆಬೇರೆಯವರ ಆಲೋಚನೆಗಳು ಏನಾದರೂ ಕಾರಣಾಂತರಗಳಿಂದ ಒಂದಕ್ಕೊಂದು ಹೊಂದಿಕೊಂಡಾಗ ಮಾತ್ರ ಅವರು ಒಬ್ಬರನ್ನೊಬ್ಬರು ನೋಡಿ ಸಂತೋಷಿಸುವರು ; ಒಬ್ಬರನ್ನೊಬ್ಬರು ಹೊಗಳುವರು ; ಒಬ್ಬರ ಸ್ವತಂತ್ರ ಬುದ್ಧಿಯು ಆಗಾಗ ಕಾಲುಜಾರಿ ಗದಿಂದ ಮಾರ್ಪಾಡನ್ನು ಹೊಂದಿ ಒಂದನ್ನೊಂದು ಕಡಿಸುವುದುಂಟು. ವ್ಯಾಯಿಕವಾಗಿ ಮನುಷ್ಯರ ಚಿತ್ತವು ಅನಿತ್ಯವಾದುದರಿಂದ ಮನಸ್ಸು ಕಟ್ಟುಕೊಂಡಾಗ ಅಸಕ್ತಿ ತಕ್ಕಂತೆ ಬುದ್ಧಿಯು ಸ್ವತಂತ್ರ

ಪ್ರದು. ಬಾಲ್ಯದಲ್ಲಿನ ಬುದ್ಧಿಯು ಯೌವನದಲ್ಲಿ ಬದಲಾಗುವುದು ; ಮಧ್ಯ ಕಾಲದ ಬುದ್ಧಿಯು ಆದಕ್ಕೆ ಭಿನ್ನಭಿನ್ನವಾಗುವುದು ; ಮುಪ್ಪಿನಲ್ಲಿರುವ ಬುದ್ಧಿಯೇ ಬೇರೆ. ಹೀಗೆ ಅವಸ್ಥಾವಿಶೇಷಗಳಿಂದ ಬುದ್ಧಿಯು ವಿಕಲ್ಪವಾಗಿ ಮೋಹಪರವಶನಾಗಿ ಮನುಷ್ಯನು ಬದಲಾವಣೆ ಹೊಂದುತ್ತಿರುವನು ; ಮನುಷ್ಯನಿಗೆ ಘೋರವಾದ ವ್ಯಸನವಾಗಲಿ, ಮಹಾ ಐಶ್ವರ್ಯವಾಗಲೀ ಉಂಟಾದಾಗಲೂ ಅವನ ಬುದ್ಧಿಯಲ್ಲಿ ಅದಕ್ಕೆ ತಕ್ಕಂತೆ ವಿಕಾರಗಳುಂಟಾಗುವವು ; ಹೀಗೆ ಒಬ್ಬನಲ್ಲಿಯೇ ಆಗಾಗ ಬುದ್ಧಿಭೇದಗಳುಂಟಾಗುವುವು. ಪ್ರಜ್ಞೆಯೆಂಬುದು ಅನಿತ್ಯವಾದುದು ; ಅದು ಅವನಿಗೂ ಒಮ್ಮೆಮ್ಮೆ ರುಚಿಸುವುದಿಲ್ಲ ; ಆಗಾಗ ಯಾವ ಆಲೋಚನೆಯು ಸಾಧ್ಯವೋ ಅದನ್ನು ಮನುಷ್ಯನು ತನ್ನ ಬುದ್ಧಿಯು ಹೋಗುವವರೆಗೆ ದೂರದೃಷ್ಟಿಯಿಂದ ಆಲೋಚಿಸಿಕೊಂಡರೆ, ಅಂತಹ ಕಾರ್ಯವನ್ನೇ ಅವನು ಸರಿಯಾಗಿ ನಡಿಸುವನು. ಅದು ಅವನಿಗೆ ಕಾರ್ಯೋತ್ಸಾಹವನ್ನು ಹೆಚ್ಚಿಸುವುದು ಎಂಬುದಾಗಿರುತ್ತೆ.

ಈ ಕಾರಣದಿಂದ ಬುದ್ಧಿಯನ್ನು ಸುಖಕ್ಕಾಗಿ ಯಾವ ರೀತಿ ಬದಲಾಯಿಸಬೇಕೆಂಬುದನ್ನು ನಮ್ಮ ಪ್ರಜ್ಞೆಯ ಮೂಲಕ ಸಾವಧಾನವಾಗಿ ಯೋಚಿಸಬೇಕು.

— ಸನಾತನ

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

ಸಿಮೆಂಟಿನ

ಉಪಯೋಗಗಳು

ಇಂದಿನ ಕಾಲದ ರೈತರಿಗೆ ಸಿಮೆಂಟು ಅದೆಂತಹ ವರಪ್ರದವಾಗಿದೆ. ಹಳೇ ಕಾಲದಲ್ಲಿ ಅತ ಕಟ್ಟಿಸಿಕೊಳ್ಳಲಿಕ್ಕಿದ್ದ ತನಗೆ ಬೇಕಾದ ಕಣಜದಲ್ಲಿನ ಬಾಳಿಕೆಯು ನೆಲವಾಗಲಿ, ಕೋಳಿಗೂಡು ಉಗ್ರಾಣ, ಗೊಬ್ಬರ ಗುಂಡಿ, ಕೈತಿಸಾವನುಗ್ರಿಗಳನ್ನಿಡುವ ಕೊರಣೆ, ಹಾಲಿನ ಕವಾಟು, ಗಾಡಿ ಕೊಟ್ಟಿಗೆ, ನೆಲಮಾಳಿಗೆ ಉಗ್ರಾಣ, ಗೇಟು ತೊಟ್ಟಿ, ಬೇರೆ ಅಥವಾ ಕೊಳವೇ ಆಗಲಿ ಇಂದು ಸಿಮೆಂಟ್ ಕಾಂಕ್ರೀಟ್‌ನಿಂದ ಅಧುನಿಕವಾಗಿದೆ. ವ್ಯವಸಾಯಗಾರನು ತನ್ನ ನೆಲಮಾಳಿಗೆಯ ಸಾಮಾನುಗಳನ್ನು ಕುಸಿದು ಹೋಗಬಹುದೆಂದು ಹೆದರಬೇಕಾಗಿಲ್ಲ ಕಾಂಕ್ರೀಟ್ ನೆಲ ಮತ್ತು ಗೋಡೆಗಳಿಂದ ಅತನಿಗೆ ನಿಶ್ಚಿಂತತೆಯಿಂದ ಇರಲು ಸಾಧ್ಯವಾಗಿದೆ ಇಲಿ ಹೆಗ್ಗಣಗಳ ಹಾವಳಿ ದೂರವಾಗಿದೆ ಕಾಂಕ್ರೀಟು ನೆಲಗಳು ನೀರನ್ನು ಹೀರದಿದ್ದು ತೇವತರಲಾದಂತಹವುಗಳಿಗಿಡುವುದರಿಂದ ಶುಚಿಯಾಗಿಯೂ ಆರೋಗ್ಯಕರವಾಗಿಯೂ ಇದನ್ನು ಇರಿಸಬಹುದಾದುದರಿಂದ ಆರೋಗ್ಯ ರಕ್ಷಣೆಯೇ ಅತನ ಮನೆಬಾಗಿಲಿದ್ದಂತಾಗುವುದು ಈ ನೆಲಗಳು ಗಟ್ಟಿಯಾಗಿದ್ದು ನಯವಾಗಿರುವ ಮೇಲ್ಮೈವಾಸನೆಗಳನ್ನು ಸ್ಥಿರವಾಗಿ ನಿಲ್ಲಗೊಡುವುದಿಲ್ಲ ಕಣದ ನೆಲವು ಶುಚಿಯಾಗಿದ್ದು ಅಮೂಲ್ಯ ಗೊಬ್ಬರಗಳನ್ನು ಕೂಡಿಡಲು ಹುರುಪೀಯುತ್ತವೆ. ಈ ಅಸಂಖ್ಯಾತ ಸೌಲಭ್ಯಗಳಿದ್ದರೂ ಇದು ಮಿತವ್ಯಯದಾಯಿ. ರಕ್ಷಣ ಖರ್ಚು ಅಗಣನೀಯ. ವ್ಯವಸಾಯಗಾರರಿಗೆ ಬೇಕಾದ ಸಕಲ ಸಾಮಗ್ರಿಗಳನ್ನೂ ಭದ್ರಾವತಿಯಲ್ಲಿಂದ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ತಯಾರಾಗುವ **ಚಾಮುಂಡಿ ಬ್ರಾಂಡ್ ಸಿಮೆಂಟಿ**ನಿಂದ ತಯಾರಿಸಿಕೊಳ್ಳಬಹುದು.



'ಗೋರಕ್ಷಣ'

ತಿಂಗಳಿಗೊಂದಾವರ್ತಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ ಪಾಲನೆದಯೆ, ಸಪ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು.

ವಿಳಾಸ: 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು

ಅಪೇರಾ 18-1-51 ರಿಂದ

ಪ್ರಕಾಶ್, ಗುಲಶ್ನರ್, ಬಚ್ಚೊ, ಶಿರಾಜ್, ಮನ್ಸೂರ್, ಇಂದ್.ಬಾಲಿ

ಪರಾತ್ರವಹಿಸಿರುವ ಸೊಗಸಾದ ಹಿಂದಿ ಚಿತ್ರ

ಫ್ಲೈಯಿಂಗ್ ಎಕ್ಸ್‌ಪ್ರೆಸ್

Flying Express

ರಣಜಿತ್ 12-1-51 ರಿಂದ

Nirala ನಿರಾಲ

ಪಾತ್ರ— ಮಧುಬಾಲಾ, ದೇವಾನಂದ, ಯಾಕೂಬ್, ಮಜರ್‌ಖಾನ್

ಇತರ ಚಿತ್ರಗಳಲ್ಲಿ ಕಾಣದಿರುವ ಅನೇಕ ಸನ್ನಿವೇಶಗಳು ಈ ಹಿಂದಿ ಚಿತ್ರದಲ್ಲಿ

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 19—1—51 ರಿಂದ — 3 ದಿನಗಳು

ಷಹರ್ ಸೆ ದೂರ್

ಪಾತ್ರ— ಮಾನಾ, ಆಲ್ ನಸೀರ್, ಓಂ ಪ್ರಕಾಶ್ (ಹಿಂದಿ)

ಉಡ್‌ಲಾಂಡ್ ಶಿಸು

14-1-51 ರಿಂದ

ವೀರ ಬಬ್ರುವಾಹನ

ಶಶಿ ಕಪೂರ್ — ಮೃದುಲ್ ಅಭಿನಯಿಸಿರುವ

ಸಾಹಸ, ರೋಮಾಂಚದಾಯಕ,

ಆನಂದಕರ ಸನ್ನಿವೇಶಗಳಿಂದ

ಕೂಡಿದ ಅವೋಘ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ

19—1—51 ರಿಂದ 3 ದಿವಸಗಳು

ನಂಜೋಗ್

ಪಾತ್ರ— ಜಾರ್ಜ್, ಮೆಹತಾಬ್, ಉಲ್ಲಾಸ್, ವಾಸ್ (ಸುಂದರ ಹಿಂದಿ ಚಿತ್ರ)

ಸತ್ಯವಾದಿ For Quality Printing

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು **L. N. Press**

ಪಂಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ Sivarampet, Mysore

Edited, Printed and Published by M. S. Krishna Rao. at the Satyavadi Press Chamrajpuram Mysore